<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ  ನ್ಯಾಯಾಲಯ</u>

<u>ಸಿದ್ದಾಪುರ</u>

<u>ಸಿ.ಸಿ.  794/2023</u>

| | |
|---|---|
| ಸಿ.ಡಬ್ಲ್ಯೂಃ | 9 |
| ಪಿ.ಡಬ್ಲ್ಯೂಃ | 5 |

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ಸೋಮಶೇಖರ ಎಂ ಮೈತ್ರಿ |
| ತಂದೆ ಹೆಸರು | ಃ | ಮಹದೇವ |
| ವಯಸ್ಸು | ಃ | 52 ವರ್ಷ |
| ವೃತ್ತಿ | ಃ | ಎ ಎಸ್ ಐ ,ಮುಂಡಗೋಡ ಪೋಲೀಸ ಠಾಣೆ |
| ವಾಸ | ಃ | ಮುಂಡಗೋಡ |

**<u>ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 11–06–2026</u>**

**<u>ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ</u>**

ನಾನು ಜೂನ್ -2023 ರಿಂದ ಜನವರಿ -2024 ರ ವರೆಗೆ ಸಿದ್ದಾಪುರ ಪೋಲೀಸ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿ ರುತ್ತೇನೆ.

ದಿಃ 19-08-2023 ರಂದು ನಾನು ಠಾಣಾ ಎಸ್ ಎಚ್ ಓ ಕರ್ತವ್ಯದಲ್ಲಿ ಇದ್ದಾಗೆ ಮದ್ಯಾಹ್ನ 3-30 ಗಂಟೆ ಸಮಯದಲ್ಲಿ ಚಾಸಾ-1 ರವರು ಪೋಲೀಸ ಠಾಣೆಗೆ ಹಾಜರಾಗಿ ಒಂದು ಲಿಖಿತ ದೂರನ್ನು ನನ್ನ ಸಮಕ್ಷಮ ಹಾಜರುಪಡಿಸಿದ್ದು ಸದರಿ ದೂರಿನ ಸಾರಾಂಶದ ಮೆಲಿಂದ ಠಾಣೆ ಗುನ್ನೆ ಸಂಖ್ಯೆ120/2023 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ,ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿಗೆ ಈಗ  ದೂರನ್ನು ತೋರಿಸಿದ್ದು ಸಾಕ್ಷಿಯು ಅದನ್ನು  ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಪ್ರ.ವ.ವರದಿನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ನಂತರ ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-10 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ**

ಚಾಸಾ-1 ರವರು ದೂರನ್ನು ನನ್ನ ಸಮಕ್ಷಮ ಬರೆದುಕೊಟ್ಟಿರುತ್ತಾರೆ. ದೂರನ್ನು ಚಾಸಾ-1 ರವರಗೆ ಸ್ವತಃ ಬರೆದಿರುತ್ತಾರೆ.

ಪ್ರ.ವ.ವರದಿಯನ್ನು ತಯಾರಿಸುವ ಪೂರ್ವದಲ್ಲಿ ಘಟನೆಯ ಬಗ್ಗೆ ನಿವೇನಾದರೂ ಪ್ರಾಥಮಿಕ ತನಿಖೆ ಮಾಡಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ದೂರಿನಲ್ಲಿ ಚಾಸಾ-1 ಹಾಗೂ ಆರೋಪಿಯ ನಡುವೆ ಸಿವಿಲ್ ವ್ಯಾಜ್ಯ ಇರುವ ಬಗ್ಗೆ ನಮೂದು ಮಾಡಿರುತ್ತಾರೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ದೂರುದಾರರು ನೀಡಿದ ಸುಳ್ಳು ದೂರಿನ ಆಧಾರದ ಮೇಲೆ, ಅವರಿಗೆ ಅನುಕೂಲ ವಾಗಲಿ ಎಂದು ನಾನು ಸುಳ್ಳು ಪ್ರ.ವ.ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ತಿಳಿಸಿರುವಂತೆ ಆರೋಪಿ ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಸ.ಒ

ಸಹಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ

ಸಿದ್ದಾಪುರ